
ಕವಿತೆ

# ರಷ್ಯ ಕವಯಿತ್ರಿ 'ವೇರಾ ಪಾವಲೋವಾ' ಕವಿತೆಗಳು



1

ಸಂತೋಷಕ್ಕೆ
ನನ್ನೆದೆಯಲ್ಲಿ ಈಗಲೂ
ಬೇಕಾದಷ್ಟು ಜಾಗವಿದೆ.
ಎತ್ತ ನೋಡಿದರೂ
ನಾನಿನ್ನೂ ಬರೆಯದೇ ಇರದ
ಪುಸ್ತಕಗಳ ವಾಕ್ಯಗಳು ಕಾಣುತ್ತವೆ.

2

ಟಾಲ್‌ಸ್ಟಾಯ್: 'ಪಕ್ಕದ ಕೋಣೆಯಲ್ಲಿ
ಮಗುವೊಂದು
ಕೊನೆಯುಸಿರು ಎಳೆಯುತ್ತಿರುವಂತೆ
ಮನುಷ್ಯನು ಬದುಕಬೇಕಾಗಿದೆ.'
ನಾನು ಹೇಳುತ್ತೇನೆ: 'ಆ ಮಗು ನನ್ನ
ಗರ್ಭದಲ್ಲೇ ಪ್ರಾಣ ಬಿಡುತ್ತಿದೆಯೇನೋ
ಎಂಬಂತೆ ನಾನು ಬದುಕುತ್ತೇನೆ.'

3

ಪುಸ್ತಕವೊಂದರ ಶೀರ್ಷಿಕೆಗೆ
ತನ್ನೆಲ್ಲಾ ಸಾಲುಗಳೂ
ಯೋಗ್ಯವಾಗಿರುವಂತಿರುವುದೇ
ನಿಜವಾದ ಆದರ್ಶ ಕವಿತೆ.

4

ನನಗವನು ಜೀವನವನ್ನೇ ಕೊಡುಗೆ ಕೊಟ್ಟ.
ನನ್ನ ಕವಿತೆಗಳನ್ನಲ್ಲದೆ ಇನ್ನೇನು ತಾನೆ
ಕೊಡಬಲ್ಲೆ ನಾನು?...
ಅವು ನನ್ನ ಕವಿತೆಗಳೇನು?...
ಬಾಲ್ಯದಲ್ಲಿ ನಮ್ಮಮ್ಮನ
ಹುಟ್ಟು ಹಬ್ಬದಂದು ಅವಳಿಗೆ ನೀಡಲು
ಶುಭಾಶಯದ ಕಾರ್ಡುಗಳನ್ನು
ಹುಡುಕುತ್ತಿದ್ದೆ.
ಬೆಲೆ ತೆರಲು ನಮ್ಮಪ್ಪನ ದುಡ್ಡಿರುತ್ತಿತ್ತು.

5

ಸ್ತ್ರೀಗೆ ಒಬ್ಬ ಪುರುಷ
ಮಾತೃಭೂಮಿ ಇದ್ದಂತೆ.
ಪುರುಷನಿಗೆ ಒಬ್ಬ ಸ್ತ್ರೀ
ಕೇವಲ ಒಂದು ರಸ್ತೆಯಂತೆ.
ಎಷ್ಟು ದಾರಿ ಕ್ರಮಿಸಿದೆ ನೀನು?...
ಪ್ರಿಯನೇ ಸ್ವಲ್ಪ ಸುಧಾರಿಸಿಕೋ...
ಇಲ್ಲೊಂದು ಎದೆಯಿದೆ ನೋಡು
ನಿನ್ನ ತಲೆಯಿಡು.
ಇಲ್ಲೊಂದು ಹೃದಯವಿದೆ ನೋಡು
ಡೇರೆ ಹಾಕು.
ಸಮ ಸಮ ಹಂಚಿಕೊಳ್ಳೋಣ
ದುಃಖದ ಕಠೋರ ಅವಶೇಷಗಳನ್ನು.

**● ಕನ್ನಡಕ್ಕೆ: ಸಿ.ವಿ. ಶೇಷಾದ್ರಿ ಹೊಳವನಹಳ್ಳಿ**